ಅವರ ವಿಷಯ ಇಷ್ಟೆ. ಅವರು ಈಗಾಗಲೇ ಕಂಪ್ಲೇಂಟ್ ಕೊಟ್ಟಿದ್ದಾರೆ. ಕಂಪ್ಲೇಂಟ್ ಬಗ್ಗೆ ವಿಚಾರಣೆ ಮಾಡಿ ಅದರ ಬಗ್ಗೆ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :— ಸಿಎಂ ಎನ್ಕ್ವೈರಿ ಮಾಡಿಸಿ, ಇಲ್ಲ, ಅರ್ಧ ಗಂಟೆ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಇದು ಮಹತ್ವದ ವಿಷಯ ಇದೆ. ಒಬ್ಬರ ಮೇಲೆ ಒಬ್ಬರ ಆಪಾದನೆಯಾಗಿದೆ. ಇದರ ಬಗ್ಗೆ ನಾಳೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಟ್ಟರೆ ಸವಿಸ್ತಾರವಾಗಿ ಹೊರಗಡೆ ಬರುತ್ತದೆ.

ಧೇರ್ಮನ್ :— ನೀವು ಪರಸ್ಪರ ಮಾತನಾಡುವುದು ಕಡತಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ಸವಿಸ್ತಾರವಾದ ಚರ್ಚೆ ಮಾಡಬೇಕು. ಎಲ್ಲರೂ ಒಪ್ಪುವುದಾದರೆ ಅದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡೋಣ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಅಧ್ಯಕ್ಷರೆ, ರಾಜಕೀಯ ಕ್ಷೇತ್ರದಲ್ಲಿ, ಸಹಕಾರ ಕಡಿಮೆ, ಸಹಕಾರ ಕ್ಷೇತ್ರದಲ್ಲಿ ರಾಜಕೀಯ ಜಾಸ್ತಿ ಎನ್ನುವುದು ಇಷ್ಟು ಗೊತ್ತಾಗುತ್ತಿದೆ, ಇದನ್ನು ಬಹಳ ದುಃಖದಿಂದ ಹೇಳುತ್ತಿದ್ದೇವಿ.

(ಈ ಹಂತದಲ್ಲಿ ಅಧ್ಯಕ್ಷರು ಅಧ್ಯಕ್ಷರ ಪೀಠವನ್ನಲಂಕರಿಸಿದರು)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :— ಇದು ಬಹಳ ಮಹತ್ವದ ವಿಷಯ ದಯವಿಟ್ಟು ಅರ್ಧಗಂಟೆ ಚರ್ಚೆಗೆ ಕಾಲಾವಕಾಶ ಮಾಡಿಕೊಡಿ.

ಅಧ್ಯಕ್ಷರು :— ತಮಗೆ ಮತ್ತು ಶ್ರೀನಿವಾಸಗೌಡರಿಗೆ ನಾಳೆ ಸಮಯ ನೋಡಿಕೊಂಡು ಅವಕಾಶ ಮಾಡಿಕೊಡುತ್ತೇನೆ.

ಐ) ರಾಷ್ಟ್ರದಲ್ಲಿ ಒಂದಂಕ ಲಾಟರಿ ನಿಷೇಧ ಕುರಿತು.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಸಭಾಧ್ಯಕ್ಷರೆ, ಹೊಂಬೆಯಾ ಪಿಶಾಚಿ ಎಂದರೆ ಬಂದೆ ಗಾಬರಿಯಾಗುತ್ತೆ, ಎಂದು ಒಂದು ಗಾದೆ ಇದೆ. ಕರ್ನಾಟಕದಲ್ಲಿ, ಇಡೀ ದೇಶದಲ್ಲಿ ಸಿಂಗಲ್ ಡಿಜಿಟ್ 2ನೇ ಅಕ್ಟೋಬರ್ 1997ನೇ ಇಸವಿಗೆ ಗಾಂಧಿ ಜಯಂತಿ ದಿವಸ ಇಡೀ ರಾಷ್ಟ್ರದಲ್ಲಿ ಸಿಂಗಲ್ ಡಿಜಿಟ್ ಲಾಟರಿ ಪಿಡುಗನ್ನು ನಿಲ್ಲಿಸಲಾಯಿತು. ಆದರೆ ಬೆಂಗಳೂರಿನಲ್ಲಿ ಕಳೆದ ಒಂದು ವಾರದಿಂದ ಒಂಬತ್ತು ಲಾಟರಿ ಪಿಡುಗು, ಸಾಮ್ರಾಜ್ಯ ಕಾಯಿಲೆ ಬಹಳ ವ್ಯಾಪಕವಾಗಿ ಇಷ್ಟು ಜನರಿಯುತ್ತಿದೆ. ಬೆಂಗಳೂರಿನಲ್ಲಿ ಸಿಂಗಲ್ ಡಿಜಿಟ್ ಲಾಟರಿ ನಡೆಯುತ್ತಿರುವುದು, ಸಿಟಿ ಬೆಳಿ, ಜಯಲಕ್ಷ್ಮಿ, ಸುಬ್ಬಲಕ್ಷ್ಮಿ, ಕಲಾ ಬೆಳಿ ಮತ್ತು ರಾಜಲಕ್ಷ್ಮಿ ಇವು ಲಾಟರಿ ಹೆಸರುಗಳು. ಇವು ಲಾಟರಿಗಳು ಇನ್ಫೆಕ್ಟ್ ಲಾಟರಿ ಒಂದು ನಡೆಯುತ್ತಿದೆ. ಸರ್ಕಾರದ ಅಧಿಕೃತ ಮಾಹಿತಿ ಈ ಲಾಟರಿಗಳು ಪ್ರತಿ ದಿವಸ ಸಂಜೆ ಮೂರು ಗಂಟೆಗೆ ಲಾಟರಿ ಡ್ರಾ ಮಾಡುತ್ತಿದ್ದಾರೆ. ಸರ್ಕಾರದ ಅಧಿಕೃತ ಮಾಹಿತಿಯನ್ವಯವೇ ಲಾಟರಿಯವರು ನಾಲ್ಕು ಡಿಜಿಟ್ಟಿನ ಫಲಿತಾಂಶ ಪ್ರಕಟ ಮಾಡುತ್ತಾರೆ. ಆದರೆ ಆ ಫಲಿತಾಂಶ ಎಷ್ಟು

ಅಂತಿಗಳು ಹಮ್ಮಿ ಮೂರನೇ ಅಂತ ಮಾತ್ರ ಇವರಿಗೆ ಬಹುಮಾನಕ್ಕೆ ಅರ್ಹವಾದುದು. ಹೈಕೋರ್ಟ್ ಒಂದು ಡೈರೆಕ್ಷನ್ ಕೊಟ್ಟಿದೆ. ಸಿಂಗಲ್ ಡಿಜಿಟ್ ಮತ್ತುಡಬ್ಬಲ್ ಡಿಜಿಟ್ ಲಾಟರಿ ಮತ್ತು ಇನ್‌ಸ್ಟಂಟ್ ಲಾಟರಿಯನ್ನು ಯಾರೇ ಆಗಲಿ ನಡೆಸುವುದಕ್ಕೆ ಕೊಡಬಾರದೆಂದು ಹೈಕೋರ್ಟ್ ಹೈಕ್ಷನ್ ಇದೆ. ಈ ಡೈಕ್ಷನ್ ಇದ್ದರೂ ಕೂಡ ಬೆಂಗಳೂರಿನಲ್ಲಿ ಹಾಡುಹಗಲೇ ಧೈರ್ಯವಾಗಿ ಒಂದಂಕಿ ಲಾಟರಿಯನ್ನು ನಡೆಸುತ್ತಿದ್ದಾರೆ. ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುವುದೇನೆಂದರೆ ಬೆಂಗಳೂರಿನ ಮೆಜೆಸ್ಟಿಕ್ ಸುತ್ತಮುತ್ತ, ರಾಜಾಜಿನಗರದಲ್ಲಿ, ಮಲ್ಲೇಶ್ವರಂನಲ್ಲಿ ಮತ್ತು ಚಿಕ್ಕಪೇಟೆಯಲ್ಲಿ ಒಂದಂಕಿ ಲಾಟರಿ ಮಾರಾಟ ನಡೆಯುತ್ತಿದ್ದು ಇದರಿಂದಾಗಿ ಅನೇಕ ಯುವಕರ ಜೀವನವನ್ನು ಸೂರೆಗೊಳ್ಳಲಾಗುತ್ತಿದೆ. 9 ಗಂಟೆಯಾದ ಮೇಲೆ ಆಟೋ ರಿಕ್ಷಾ ಡ್ರೈವರ್‌ಗಳೂ ಕೂಡ ಪ್ರಯಾಣಿಕರಿಗೆ ಸಿಗದೇ ಒಂದಂಕಿ ಲಾಟರಿಯನ್ನು ಅಲ್ಲಿಗೆ ಹೋಗಿ ಆಡುತ್ತಿದ್ದಾರೆ. ಆದುದರಿಂದ ಸರ್ಕಾರ ಕೂಡಲೇ ಒಂದಂಕಿ ಲಾಟರಿಯನ್ನು ಪ್ರತಿಬಂಧಿಸಬೇಕು. ನನಗೆ ತಿಳಿದಿರುವ ಹಾಗೆ 1997 ರಲ್ಲಿ ಪ್ರತಿ ಅರ್ಧ ಗಂಟೆ ಮತ್ತು ಒಂದು ಗಂಟೆಗೆ ಲಾಟರಿ ಡ್ರಾಗಳು ಆಗುತ್ತಿತ್ತು. ಆದೇ ಪರಿಸ್ಥಿತಿ ಇಂದು ಬೆಂಗಳೂರಿನಲ್ಲಿ ಬರುವುದರಲ್ಲಿದೆ. ಪೋಲೀಸ್ ಅಧಿಕಾರಿಗಳೂ ಕೂಡ ಇದಕ್ಕೆ ಸೂಕ್ತವಾದ ರಕ್ಷಣೆಯನ್ನು ಕೊಡುತ್ತೇವೆ ಎನ್ನುವ ಧೈರ್ಯವನ್ನು ಇವೊತ್ತು ತೋರಿಸುತ್ತಿದ್ದಾರೆ. ನಾನು ಅಧ್ಯಕ್ಷರಲ್ಲಿ ಕೇಳಿಕೊಳ್ಳುವುದೇನೆಂದರೆ ಮತ್ತೆ ಒಂದಂಕಿ ಲಾಟರಿಯ ಸಾಂಕ್ರಾಮಿಕ ರೋಗದ ಪಿಡುಗಿಗೆ ದಯವಿಟ್ಟು ಅವಕಾಶ ಮಾಡಿಕೊಡಬೇಡಿ. ಲಕ್ಷಾಂತರ ಕುಟುಂಬಗಳು ಇದರಿಂದಾಗಿ ಹಾಳಾಗುವುದಕ್ಕೆ ದಾರಿ ಮಾಡಿಕೊಡಬೇಡಿ. ಇದು ನನ್ನ ಪ್ರಾಮಾಣಿಕವಾದ ಕಳಕಳಿ. ಇದಕ್ಕೆ ಸರ್ಕಾರ ಪ್ರತಿಕ್ರಿಯಿಸಬೇಕೆಂದು ತಿಳಿಸಿಕೊಳ್ಳುತ್ತೇನೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :— ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಈ ಹಿಂದೆ ಹಲವಾರು ಬಾರಿ ಚರ್ಚೆಯಾಗಿ ನಿಷೇಧ ಮಾಡಲಾಗಿತ್ತು. ಆದರೆ, ಈಗ ಆ ಲಾಟರಿ ಇನ್ನೊಂದು ಸ್ವರೂಪದಲ್ಲಿ ಬಂದಿದೆ. ಈ ಪಿಡುಗು ಬೆಂಗಳೂರಿಗೆ ಮಾತ್ರ ಸೀಮಿತವಾಗಿರದೇ ಎಲ್ಲಾ ಜಿಲ್ಲಾ ಕೇಂದ್ರ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ನಡೆಯುತ್ತಿದೆ. ಈ ಒಂದಂಕಿ ಲಾಟರಿ ಕೋಲಾರ ಮತ್ತು ತಿಪ್ಪಗೊಂಡನಹಳ್ಳಿಯಲ್ಲೂ ಕೂಡ ನಡೆಯುತ್ತಿದೆ. ಇದರಿಂದಾಗಿ ಲಕ್ಷಾಂತರ ಯುವಕರು ಲಕ್ಷಾಂತರ ರೂಪಾಯಿಗಳನ್ನು ಕಳೆದುಕೊಂಡು ಆ ಹಣವನ್ನು ಮತ್ತೆ ಗಳಿಸುವುದಕ್ಕಾಗಿ ಬೇರೆ ಬೇರೆ ಸ್ಥಳೀಯ ಅಪ್ರಾಮಾಣಿಕ ಕೆಲಸಗಳಲ್ಲಿ ತೊಡಗಿ ದರೋಡೆ ಮತ್ತು ಕಳ್ಳತನಗಳನ್ನು ಮಾಡುವ ಹಂತಕ್ಕೆ ಬರುತ್ತಿದ್ದಾರೆ. ಇದು ಬೇರೆ ಬೇರೆ ರೂಪಗಳಲ್ಲಿ ಲಾಟರಿ ಬರುವುದರಿಂದ ಸರ್ಕಾರ ಇದರ ಬಗ್ಗೆ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ನಾವು ಹಿಂದೆ ಇದರ ಬಗ್ಗೆ ಪ್ರಸ್ತಾಪ ಮಾಡಿದಾಗ ಒಂದಂಕಿ ಲಾಟರಿಯನ್ನು ನಿಷೇಧ ಮಾಡಲಾಯಿತು. ಆದರೆ ಈಗ ನಾಲ್ಕು ಅಂಕಿ ಲಾಟರಿ ಫಲಿತಾಂಶವೆಂದು ಪ್ರಚಾರ ಆಗುತ್ತಿದೆ ಆದ ಅಂಚೆಪತ್ರಿಕೆಗಳಲ್ಲಿ ಒಂದು ಅಂಕೆ ಇಟ್ಟುಕೊಂಡು ಲಾಟರಿಯನ್ನು ನಡೆಸುತ್ತಿದ್ದಾರೆ. ಪೋಲೀಸರಿಗೂ ಈ ಸುದ್ದಿ ಬಹಳ ಗೊತ್ತಿದೆ. ಇದನ್ನು ತಡೆಗಟ್ಟಿದಲ್ಲಿ ಭಾರಿ ಅನಾಹುತವೇ ಆಗುವುದರಿಂದ ಸರ್ಕಾರ ಇದರ ಬಗ್ಗೆ ಸ್ಪಷ್ಟವಾಗಿ ತಿಳಿಸಲಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಒಂದಂಕಿ ಲಾಟರಿಯನ್ನು ಮಾಡುತ್ತಿದ್ದವರನ್ನು ಸುಮಾರು ಹತ್ತು ಬಾರಿಯೇ ಅರೆಸ್ಟ್ ಮಾಡಿದ್ದಾರೆ. ಪೋಲಿಸ್‌ನವರು ಅರೆಸ್ಟ್ ಮಾಡಿದಾಗ ಸ್ವಲ್ಪ ದಂಡ ಹಾಕಿ ಅವರನ್ನು ಬಿಟ್ಟುಬಿಡುತ್ತಾರೆ. ಬಿಡುಗಡೆಯಾಗಿ ಮತ್ತೆ ಅದೇ ದಂಧೆಯನ್ನು ಮುಂದುವರಿಸುವ ವ್ಯಕ್ತಿಗಳ ಬಗ್ಗೆ ಕಟ್ಟುನಿಟ್ಟಿನ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಬೇಕು. ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿ ಕ್ರಮ ತೆಗೆದುಕೊಳ್ಳದಿದ್ದರೆ ಇಂದು ಬಡತನ ರೇಖೆಯಲ್ಲಿರುವ ಜನರು ಇದರಿಂದಾಗಿ ಸರ್ವನಾಶವಾಗಿಬಿಡುತ್ತಾರೆ.

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :— ಮಾನ್ಯ ಸದಸ್ಯರಾದ ಸುರೇಶ್‌ಕುಮಾರ್ ಶ್ರೀರಾಮರೆಡ್ಡಿ ಮತ್ತು ಪುಟ್ಟಣ್ಣಯ್ಯನವರು ಯಾವ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ ಅದು ಗಂಭೀರವಾದ ವಿಷಯವೇ ಆಗಿದೆ. ನಾನು ಅದಕ್ಕೆ ಸಂಬಂಧಪಟ್ಟಂತೆ ಸುದೀರ್ಘವಾದ ಹೇಳಿಕೆಯನ್ನು ಕೊಡುವುದಕ್ಕೆ ಗೃಹ ಮಂತ್ರಿಗಳಿಗೆ ಹೇಳುತ್ತೇನೆ. ಇದನ್ನು ನಾಳೆಯೇ ಕೊಡುವುದಕ್ಕೆ ಹೇಳುತ್ತೇನೆ. ಏಕೆಂದರೆ ಇದರಿಂದಾಗಿ ಅನೇಕ ಯುವಕರು ಬಲಿಯಾಗುತ್ತಿದ್ದಾರಲ್ಲದೇ ಇದು ಬೆಂಗಳೂರಿನಲ್ಲಿ ಮಾತ್ರವಲ್ಲದೇ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ನಡೆಯುತ್ತಿದೆ. ನಾಳೆಯೇ ಸಂಬಂಧಪಟ್ಟ ಮಂತ್ರಿಗಳಿಂದ ಇದರ ಬಗ್ಗೆ ಹೇಳಿಕೆಯನ್ನು ಕೊಡಿಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಅಧ್ಯಕ್ಷರೆ, ನಾನು ಒಂದು ಮುಖ್ಯವಾದ ಅಂಶವನ್ನು ಸರ್ಕಾರದ ಗಮನಕ್ಕೆ ತರಬಯಸುವುದೇನೆಂದರೆ ಬೆಂಗಳೂರಿನಲ್ಲಿ ವೇಣುಗೋಪಾಲ್ ಶೆಟ್ಟಿ, ರಾಜ್ ಕುಮಾರ್ ಪೈ ಮತ್ತು ಆರ್.ಪಿ. ಸುರಾನ ಎಂಬ ಮೂವರು ವ್ಯಕ್ತಿಗಳು ಇಡೀ ರಾಜ್ಯದಲ್ಲಿ ಈ ಒಂದಂಕಿ ಲಾಟರಿಯನ್ನು ಬೇರೆ ಸ್ವರೂಪದಲ್ಲಿ ನಡೆಸುತ್ತಿದ್ದಾರೆ. ಇವರ ಸ್ಕೀಂ ಪ್ರಕಾರ ನಾನು 8 ಕಡೆ ಲಾಟರಿ ದಂಧೆಯನ್ನು ನಡೆಸಿದರೆ ನನಗೆ ಒಂದು ಮೊಬೈಲ್ ಕೊಡುತ್ತಾರೆ, ನಿಜವಾಗಿ ಲಾಟರಿ ಅರುಣಾಚಲಪ್ರದೇಶದಲ್ಲಿ ನಡೆಯಬೇಕು, ಆದರೆ ಅದು ಅಲ್ಲಿ ನಡೆಯುವುದಿಲ್ಲ, ಆದರೆ ಈ ಮೂವರುಗಳೇ ಒಂದು ರೂಮಿನಲ್ಲಿ ಕುಳಿತುಕೊಂಡು ಅರುಣಾಚಲಪ್ರದೇಶದಿಂದ ಲಾಟರಿ ಬಂದಿತು ಎಂಬಂತೆ ಫಲಿತಾಂಶವನ್ನು ಪ್ರಕಟಿಸುತ್ತಿದ್ದಾರೆ. ಇವರು ಈ ರೀತಿ ಮಾಡಿ ಕಾನೂನಿನ ಕಣ್ಣಿಗೆ ಮಣ್ಣೆರಚಿ ವಿರಾಜಿಸುತ್ತಿದ್ದಾರೆ. ಇಂದು ಈ ಲಾಟರಿ ಮಾಫಿಯಾ ಗ್ಯಾಂಗ್ ಏನಿದೆ ಇದರ ವಿರುದ್ಧವಾಗಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಡಿ. ಮಂಜುನಾಥ್ :— ನಾಳೆ ಇದರ ಬಗ್ಗೆ ಹೇಳಿಕೆಯನ್ನು ಕೊಡಿಸುತ್ತೇನೆ.

ಜ) ಸವಣೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ.

ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ್ ವಿಧಾನಸಭಾ ಕ್ಷೇತ್ರ) :— ಮಾನ್ಯ ಅಧ್ಯಕ್ಷರೆ, ಶಿಗ್ಗಾಂವ್ ಮತ್ತು ಸವಣೂರಿನಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿರುವ